ಓ ಎಸ್ ನಂ.51/2016

ಪಿ ಡಬ್ಲೂ-1

**ದಿಃ 19-04-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಃ-</u>** ಪ್ರತಿವಾದಿ ಪರ ಶ್ರೀ ಎ ಜಿ ಡಿ **ವಕೀಲರಿಂದಃ**

1 ನೇ ಪ್ರತಿವಾದಿ ಪುಟ್ಟೇಗೌಡರ ಹೆಂಡತಿ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನಾನು ಮೊದಲನೇ ಹೆಂಡತಿ, ಕಾಂತಮಣಿ 2 ನೇ ಹೆಂಡತಿ ಎಂದು ಉತ್ತರಿಸುತ್ತಾರೆ. ನನಗೆ ಮೂರು ಜನ ಮಕ್ಕಳಾಗುವವರೆಗೂ ನನ್ನ ಗಂಡನೊಂದಿಗೆ ಚೆನ್ನಾಗಿದ್ದೆನು. ನನ್ನ ಮದುವೆಯಾದ ಆರು ವರ್ಷಗಳಲ್ಲಿ ನನಗೆ ಮೂರು ಜನ ಮಕ್ಕಳಾಗಿರುತ್ತಾರೆ. ನನಗೆ ಮೂರು ಜನ ಮಕ್ಕಳಾದ ನಂತರ ನನ್ನ ಗಂಡ ನನ್ನೊಂದಿಗೆ ಬೇರೆಯಾಗಿರುತ್ತಾನೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನಮಗೆ ಗೊತ್ತಿಲ್ಲದಂತೆ ಹೋಗಿರುತ್ತಾನೆ ಎಂದು ನುಡಿದಿರುತ್ತಾರೆ.

ನನ್ನ ಗಂಡ ನನ್ನನ್ನು ಬಿಟ್ಟು ಹೋಗಿ ಸುಮಾರು 20 ವರ್ಷವಾಗಿರುತ್ತದೆ. ನನ್ನ ಗಂಡ ನನ್ನನ್ನು ಬಿಟ್ಟು 35 ವರ್ಷಗಳಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಆಸ್ತಿಗಳ ಸರ್ವೆ ನಂಬರ್ ಮತ್ತು ಚೆಕ್ಕುಬಂದಿ ಹೇಳಲು ಆಗುವುದಿಲ್ಲ.

ಕೆಂಗಿಕೊಪ್ಪಲು ಗ್ರಾಮ ನಮ್ಮ ಊರಿನಿಂದ 1 ಕಿ.ಮೀ ದೂರದಲ್ಲಿರುತ್ತದೆ.

<u>ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಸಾ ಓ ಹೇ ಕೇ ಸ ಇ ಒ**

(ಶ್ರೀ ಅಮರನಾಥ ಬಿ.ಎನ್)

**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**

**ಅರಸೀಕೆರೆ.**

**ಓ ಎಸ್ ನಂ.51/2016**

**ಪಿ ಡಬ್ಲೂ-1**